

## ಹೆಲ್ತ್ ಟ್ರೀ

ಜನಸಂಖ್ಯೆ, ವಾಹನ ಸಂಚಾರ ದಿನೇ ದಿನೇ ಹೆಚ್ಚಾದಂತೆ ಜನಸಾಮಾನ್ಯರು ರಸ್ತೆಯಲ್ಲಿ ಸಂಚರಿಸುವುದು ತುಂಬ ಕಷ್ಟವಾಗುತಿದೆ. ಇದಕ್ಕೆ ಪರಿಹಾರವೆಂಬಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆಯಾ ಬಡಾವಣೆಗಳಲ್ಲಿ ಉದ್ಯಾನವನವನ್ನು ನಿರ್ಮಿಸಿ ವಾಯುವಿಹಾರಕ್ಕೆ ಹಾಗೂ ವ್ಯಾಯಾಮ ಮಾಡಲು ಅನೇಕ ಉಪಕರಣಗಳ ವ್ಯವಸ್ಥೆ ಮಾಡಿದ್ದಾರೆ. ಮಕ್ಕಳನ್ನು ಆಕರ್ಷಿಸಲು ಅನೇಕ ಚಿತ್ರಗಳನ್ನು ಗೋಡೆ ಮೇಲೆ ರಚಿಸಲಾಗಿದೆ. ಇಲ್ಲಿ ನೀವು ನೋಡುತಿರುವ ಚಿತ್ರ 'ಹೆಲ್ತ್ ಟ್ರೀ'. ಈ ಮರದಲ್ಲಿ ಹಣ್ಣು, ತರಕಾರಿ, ಸೊಪ್ಪು, ವ್ಯಾಯಾಮ ಮಾಡುವ ರೀತಿಯ ಚಿತ್ರಗಳಿವೆ. ಅಂದರೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಹಾಲು, ಹಣ್ಣು, ತರಕಾರಿ, ಸೊಪ್ಪು, ಪೌಷ್ಟಿಕ ಆಹಾರ, ವ್ಯಾಯಾಮ ಎಲ್ಲ ಅತ್ಯಗತ್ಯ ಎಂಬ ಸಂದೇಶವನ್ನು ಜನಸಾಮಾನ್ಯರಿಗೆ ನೀಡುತ್ತದೆ.

—ಅಖಿಲಾ ಗುಣದಾರ್, ಬೆಂಗಳೂರು



## ರೈತ ಮತ್ತು ಸೈನಿಕ

ದೇಶ ಸುಭದ್ರವಾಗಿರಬೇಕಾದರೆ ಹೊಟ್ಟೆಗೆ ಅನ್ನ ಮತ್ತು ದೇಶದ ರಕ್ಷಣೆ ಬಹುಮುಖ್ಯವಾಗಿರುತ್ತದೆ. ಈ ಕಾರಣಕ್ಕಾಗಿಯೇ ಜೈ ಜವಾನ್, ಜೈ ಕಿಸಾನ್ ಎಂಬ ಘೋಷಣೆ ಮೊಳಗಿತ್ತು. ಯುವಜನತೆ ಇದನ್ನು ಮರೆಯಕೂಡದು ಎಂಬ ನಿಟ್ಟಿನಲ್ಲಿ ಆಗಾಗ್ಗೆ ನಾಯಕರು ಕೃಷಿಯ ಬಗ್ಗೆ ಮತ್ತು ಸೈನಿಕರ ತ್ಯಾಗ, ಬಲಿದಾನದ ಬಗ್ಗೆ ಮನವರಿಕೆ ಮಾಡಿಕೊಡುತ್ತಲೇ ಇರುತ್ತಾರೆ. ಇದರಂತೆ ರಾಯಚೂರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರವೇಶ ಪಡೆಯುತ್ತಲೇ ಕಣ್ಣ ಮುಂದೆ ಕಂಡು ಬರುವುದು ರೈತನ ನೇಗಿಲು ಮತ್ತು ಸೈನಿಕರ ಬಂದೂಕು, ಅದರ ತುದಿಗೆ ನೇತುಹಾಕಿದ ಟೋಪಿ. ಇದು ಅರ್ಥಗರ್ಭಿತವಾದ ಮಾದರಿಯಾಗಿ ಕಂಡು ಬರುತ್ತದೆ. ದೇಶದ ಭವಿಷ್ಯದ ಬೆನ್ನೆಲುಬಾದ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗುವ ನಿಟ್ಟಿನಲ್ಲಿ ಮತ್ತು ರೈತರ ಹಾಗೂ ಸೈನಿಕರಿಗೆ ಗೌರವ ಕೊಡುವ ನಿಟ್ಟಿನಲ್ಲಿ ಇದನ್ನು ಪ್ರತಿಷ್ಠಾಪಿಸಲಾಗಿದೆ. ಕಾಲೇಜಿಗೆ ಬರುವ ನೂರಾರು ವಿದ್ಯಾರ್ಥಿಗಳಿಗೆ, ಪಾಲಕ ಪೋಷಕರಿಗೆ, ಸಾರ್ವಜನಿಕರಿಗೆ ಇದೊಂದು ಅಪರೂಪದ, ಅರ್ಥಗರ್ಭಿತವಾದ ಮಾದರಿಯಾಗಿ, ಅವರೆಲ್ಲರ ಮನಗೆದ್ದಿದೆ.

—ಈರಣ್ಣ ಬೆಂಗಾಲಿ, ರಾಯಚೂರು

### ನೀವೂ ಬರೆಯಿರಿ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ, ಜೊತೆಗೆ ಆ ಬರಹಕ್ಕೆ ಸಂಬಂಧಿಸಿದ ಚಿತ್ರವೂ ಇರಲೇಬೇಕು.
ವಿಳಾಸ: editorsu@sudha.co.in